ದಿನಾಂಕ 15.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಬಿ.ಎಂ ರವರಿಂದಃ-

ನಿ.ಪಿ-10 ದಾಖಲೆಯ ಪ್ರಕಾರ ನಾನು ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುವುದಿಲ್ಲ. ಆ ರೀತಿ ವರ್ಗಾವಣೆ ಮಾಡಿಸಿಕೊಳ್ಳಲು ಯಾವುದೇ ಪ್ರಯತ್ನಪಟ್ಟಿರುವುದಿಲ್ಲ. ನಾನು ನಿ.ಪಿ-10 ರ ಪ್ರಕಾರ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ವರ್ಗಾಯಿಸುವಂತೆ ಕೋರಿ, ವಿರಾಜಪೇಟೆಯ ಪಟ್ಟಣ ಪಂಚಾಯಿತಿಗೆ ಅರ್ಜಿಯನ್ನು ನೀಡಿದ್ದು, ಆಗ ನನ್ನ ಅತ್ತೆಯವರು ತಾನು ನಿ.ಪಿ-10 ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲವೆಂದು ಹೇಳಿ, ದಾಖಲೆಗಳನ್ನು ನನ್ನ ಹೆಸರಿಗೆ ವರ್ಗಾಯಿಸದಂತೆ ತಕರಾರು ಅರ್ಜಿಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ನಿ.ಪಿ-10 ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆಂದು ಆರೋಪಿಸಿ, ನನ್ನ ಅತ್ತೆಯು ನನ್ನ ವಿರುದ್ದ ವಿರಾಜಪೇಟೆ ಟೌನ್ ಪೋಲೀಸ್ ಠಾಣೆಗೆ ಹಾಗೂ ಮಡಿಕೇರಿಯ ಪೋಲೀಸ್ ಅಧೀಕ್ಷಕರಿಗೆ ದೂರನ್ನು ನೀಡಿದ್ದರು ಎಂದರೆ ಸರಿ.

ದಿನಾಂಕ **14.09.2015** ರಂದು ನನ್ನ ಅತ್ತೆ ತನ್ನ ಇಬ್ಬರು ಹೆಣ್ಣು ಮಕ್ಕಳಾದ ಪ್ರತಿವಾದಿ **1**(ಡಿ) ಮತ್ತು (ಇ)ರವರುಗಳಿಗೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ನೋಂದಾಯಿತ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಂದಾಯಿತ ವಿಭಾಗಪತ್ರದಡಿ ಖಾತೆ ಬದಲಾವಣೆ ಕೋರಿ ಸಲ್ಲಿಸಿದ್ದ ಅರ್ಜಿಗೆ ನಾನು ತಕರಾರು ಅರ್ಜಿ ನೀಡಿದ್ದೆನು ಎಂದರೆ ಸರಿ. ಈ ಪ್ರಕರಣವು ಇತ್ಯರ್ಥವಾಗುವವರೆಗೆ ಖಾತೆ ಬದಲಾವಣೆ ಮಾಡದಂತೆ ತಕರಾರು ನೀಡಿದ್ದೆನು. ಸದರಿ ತಕರಾರಿನಲ್ಲಿ ನಿ.ಪಿ-**10** ರ ದಾಖಲೆಯ ಬಗ್ಗೆ ತಿಳಿಸಿದ ಬಗ್ಗೆ ನನಗೆ ಈಗ ನೆನಪಿಲ್ಲ.

ದಾವಾಸ್ವತ್ತಿನಲ್ಲಿರುವ ಕೆಲವು ಕೊಠಡಿಗಳ ಬೀಗದ ಕೀಗಳು ಪ್ರತಿವಾದಿಗಳ ಸ್ವಾಧೀನದಲ್ಲಿ ಇವೆ ಎಂದರೆ ಸರಿಯಲ್ಲ. ನನಗೆ ದಾವಾಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹಾ ನಾನು ನಿ.ಪಿ-**10** ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ದಾವೆಯನ್ನು ಸಲ್ಲಿಸಿ, ಪ್ರತಿವಾದಿಗಳಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯು ಇತ್ಯರ್ಥಕ್ಕಾಗಿ ಬಾಕಿ ಇರುವುದರಿಂದ ಪ್ರತಿವಾದಿಗಳಿಗೆ ದಾವಾಸ್ವತ್ತಿಗೆ ಪ್ರವೇಶಿಸದಂತೆ ಅಡ್ಡಿಯನ್ನುಂಟುಮಾಡಿ, ನಿ.ಪಿ **10** ದಾಖಲೆಯ ಪ್ರಕಾರ ತನಗೆ ದಾವಾಸ್ವತ್ತಿನ ಸ್ವಾಧೀನ ಬಂದಿರುವುದಾಗಿ ಹಕ್ಕು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿ.ಪಿ-**10** ದಾಖಲೆಯನ್ನು ನನ್ನ ಅತ್ತೆಯು

ಬರೆದುಕೊಟ್ಟಿದ್ದಾರೆ ಎನ್ನುವ ದಿನಾಂಕದಂದು ಅವರು ವಿರಾಜಪೇಟೆಗೆ ಬಂದಿರಲಿಲ್ಲ ಹಾಗೂ ನನಗೆ ಅವರು ನಿ.ಪಿ-**10** ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ **28.05.2015** ರಂದು ನನ್ನ ಅತ್ತೆಯು ಬೆಂಗಳೂರಿಗೆ ಹೋದಂತಹ ಸಂದರ್ಭದಲ್ಲಿ ನಾನು ದಾವಾಸ್ವತ್ತಿನಲ್ಲಿರುವಂತಹ ಒಂದು ಭಾಗದ ಮನೆಯ ಸ್ವಾಧೀನವನ್ನು ಅವರ ಒಪ್ಪಿಗೆ ಇಲ್ಲದೇ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅತ್ತೆಯು ದಾವಾಸ್ವತ್ತಿನ ಒಂದು ಭಾಗದ ಮನೆಯನ್ನಾಗಲೀ ಅಥವಾ ಪೂರ್ಣ ದಾವಾಸ್ವತ್ತಿನ ಸ್ವಾಧೀನವನ್ನು ನನಗೆ ಯಾವತ್ತೂ ನೀಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ವಿಧ್ಯಾಭ್ಯಾಸದ ಹಿತದೃಷ್ಟಿಯಿಂದ ದಾವಾಸ್ವತ್ತಿನಲ್ಲಿರುವ ಒಂದು ಭಾಗದ ಮನೆಯ ಸ್ವಾಧೀನವನ್ನು ಅನುಮತಿಯ ಮೇರೆಗೆ ನನ್ನ ಅತ್ತೆಯು ನನಗೆ ನೀಡಿದ್ದರು ಎಂದರೆ ಸರಿಯಲ್ಲ.

ನಮ್ಮ ಮತ್ತು ಪ್ರತಿವಾದಿಗಳ ನಡುವೆ ವೈಮನಸ್ಸು ಇದ್ದರೂ ಸಹಾ ಅವರು ನನಗೆ **1/6** ನೇ ಹಿಸ್ಸೆಯ ಭಾಗವನ್ನು ದಾವಾಸ್ವತ್ತಿನಲ್ಲಿ ನೀಡಲು ಇಚ್ಚಿಸಿದ್ದರೂ ಸಹಾ ನಾನು ನಿ.ಪಿ-**10** ದಾಖಲೆಯನ್ನು ಸೃಷ್ಟಿಸಿ, ಪೂರ್ಣ ಸ್ವತ್ತಿನ ಮೇಲೆ ಹಕ್ಕನ್ನು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದುದ್ದರಿಂದ ನಾನು ನನ್ನ ಅತ್ತೆಯನ್ನು ಈ

ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡದೇ, ನನ್ನ ಅತ್ತೆಯ ಸ್ವತ್ತಿನ ಮೇಲೆ ನನ್ನ ಮಾವನ ವಿರುದ್ದ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ**:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.